**ಚಾಸಾಃ 5  ಪ್ರಾಸಾಃ 5**

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸುಳ್ಯ, ದ.ಕ**

**ಸಿ.ಸಿ ಸಂಖ್ಯೆ: 516/2025**

| | |
|---|---|
| ಹೆಸರು | :ಮೋಹನ್ ಕುಮಾರ್ |
| ತಂದೆಯ ಹೆಸರು | :ಉದಯ ಕುಮಾರ್ |
| ಪ್ರಾಯ | :43 ವರ್ಷ |
| ಉದ್ಯೋಗ | :ಚಾಲಕ |
| ವಾಸ | :ಗೂನಡ್ಕ ಗ್ರಾಮ, ಸುಳ್ಯ ತಾಲೂಕು |

**ದಿನಾಂಕ 05.03.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ನಾನು ಟಿಪ್ಪರ್ ಲಾರಿ ನಂಃ ಕೆಎ–21–ಸಿ–2785 ರ ಮಾಲಿಕನಾಗಿದ್ದು ಅದನ್ನು ನಾನೇ ಚಾಲನೆ ಮಾಡುತ್ತೇನೆ. ನನಗೆ ಚಾಸಾ–1 ಮತ್ತು 4 ರವರ ಪರಿಚಯ ಇದೆ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿತನ ಪರಿಚಯ ಇದೆ. ದಿ. 23.3.2025 ಮತ್ತು 24.3.2025 ರಂದು ನಾನು ಗೂನಡ್ಕದ ತೆಕ್ಕಿಲ್ ಶಾಲೆಯ ಬಳಿಯಿಂದ ಆರೋಪಿ ಸನತ್ ರವರ ತೋಟದಲ್ಲಿರುವ ಬಾವಿಯನ್ನು ಮುಚ್ಚುವ ಸಲುವಾಗಿ ನನ್ನ ಟಿಪ್ಪರ್ ಲಾರಿಯಲ್ಲಿ ಮಣ್ಣನ್ನು ಸಾಗಾಟ ಮಾಡಿರುತ್ತೇನೆ. ಆ ರೀತಿ ಎರಡು ದಿನಗಳ ಕಾಲ ಮಣ್ಣನ್ನು ಸಾಗಾಟ ಮಾಡಿರುತ್ತೇನೆ. ಚಾಸಾ–4 ರವರ ಮಾಲೀಕತ್ವದ ಸಜ್ಜನ ಸಭಾಭವನದ ಪಕ್ಕದಲ್ಲಿ ಆರೋಪಿಯ ಜಮೀನು ಇರುತ್ತದೆ. ಆ ಸಭಾಭವನದ ಮುಂಭಾಗ ಸ್ವಲ್ಪ ಇಂಟರ್ ಲಾಕ್ ಅವಳವಡಿಸಿರುವ ಜಾಗ ಮತ್ತು ಮಣ್ಣು

ಇರುವ ಜಾಗ ಎರಡೂ ಇರುತ್ತದೆ. ನಾನು ಸದರಿ ಜಾಗದ ಮೂಲಕ ಮಣ್ಣನ್ನು ಸಾಗಾಟ ಮಾಡಿರುತ್ತೇನೆ. ಆ ರೀತಿ ಮಣ್ಣು ಸಾಗಾಟ ಮಾಡಿದ್ದರಿಂದ ಅಲ್ಲಿ ಏನೂ ಆಗಿರಲಿಲ್ಲ. ಸುಮಾರು 15 ರಿಂದ 20 ದಿನಗಳ ನಂತರ ಅಲ್ಲಿ ಅಕ್ರಮವಾಗಿ ಮಣ್ಣು ಸಾಗಾಟ ಮಾಡಿ ಇಂಟರ್ ಲಾಕ್ ಡ್ಯಾಮೇಜ್ ಮಾಡಿರುವುದಾಗಿ ತಿಳಿಸಿರುತ್ತಾರೆ. ಪೊಲೀಸರು ನನಗೆ ನೋಟೀಸು ನೀಡಿದ್ದು, ಸದರಿ ನೋಟೀಗೆ ನಾನು ಉತ್ತರ ನೀಡಿರುತ್ತೇನೆ. ನಾನು ಟಿಪ್ಪರ್ ಲಾರಿಯನ್ನು ಪೊಲೀಸರ ಮುಂದೆ ಹಾಜರು ಮಾಡಿದ್ದು ಅದನ್ನು ಪಂಚನಾಮೆ ಮಾಡಿ ಡ್ಯಾಮೇಜ್ ಮಾಡಿರುತ್ತಾರೆ. ಆನಂತರ ಗಾಡಿಯನ್ನು ನನ್ನ ವಶಕ್ಕೆ ನೀಡಿರುತ್ತಾರೆ. ಪಂಚನಾಮೆ ಕಾಲಕ್ಕೆ ಪೋಟೋಗಳನ್ನು ತೆಗೆದಿರುತ್ತಾರೆ. ಪಂಚನಾಮೆ ಕಾಲಕ್ಕೆ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಪಂಚನಾಮೆಯನ್ನು ನೋಡುತ್ತಿದ್ದು ಅದನ್ನು ನಿಪಿ–8 ಎಂದು, ಸಾಕ್ಷಿಯ ಸಹಿಯನ್ನು ನಿಪಿ–8(ಎ) ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ತೆಗೆದ ಪೋಟೋಗಳನ್ನು ನೋಡುತ್ತಿದ್ದು ಅವುಗಳನ್ನು ನಿಪಿ–9 ರಿಂದ 18 ಎಂದು ಗುರುತಿಸಲಾಗಿದೆ. ಆ ದಿನ ಮಣ್ಣು ಸಾಗಾಟ ಮಾಡಲು ಉಪಯೋಗಿಸಿದ ಟಿಪ್ಪರ್ ಲಾರಿಯನ್ನು ಸದರಿ ಭಾವಚಿತ್ರದಲ್ಲಿ ನೋಡಿ ಗುರುತಿಸುತ್ತೇನೆ. ಆ ದಿನ ನಾನು ನಿಪಿ–4 ಮತ್ತು 5 ರಲ್ಲಿ ಕಾಣುವ ಸ್ಥಳದಲ್ಲಿ ಮಣ್ಣನ್ನು ಸಾಗಾಟ ಮಾಡಿರುತ್ತೇನೆ. ಪೊಲೀಸರು ನೀಡಿದ ನೋಟೀಸು ಮತ್ತು ನಾನು ಅದಕ್ಕೆ ನೀಡಿದ ಉತ್ತರವನ್ನು ನೋಡುತ್ತಿದ್ದು, ಅವುಗಳನ್ನು ನಿಪಿ–19 ಮತ್ತು 20 ಎಂದು, ಸಾಕ್ಷಿಯ ಸಹಿಯನ್ನು ನಿಪಿ–19(ಎ) ಮತ್ತು 20(ಎ) ಎಂದು ಗುರುತಿಸಲಾಯಿತು. ವಾಹನ ಬಿಡುಗಡೆಗೊಳಿಸುವ ಕುರಿತು ನಾನು ಪೋಲೀಸರಿಗೆ ಬರೆದುಕೊಟ್ಟ ಮುಚ್ಚಳಿಕೆ ಪತ್ರವನ್ನು ನೋಡುತ್ತಿದ್ದು ಅದನ್ನು ನಿಪಿ–21 ಎಂದು, ಸಾಕ್ಷಿಯ ಸಹಿಯನ್ನು ನಿಪಿ–21(ಎ) ಎಂದು ಗುರುತಿಸಲಾಯಿತು. ಆರೋಪಿಯನ್ನು ಈಗ ನ್ಯಾಯಾಲಯದ ಮುಂದೆ ನೋಡಿ ಗುರುತಿಸುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ವಿ.ಜೆ ವಕೀಲರಿಂದಃ**

ಆರೋಪಿ ಚಾಸಾ–1 ಮತ್ತು 4 ರವರಿಂದ ಅನುಮತಿ ಪಡೆದು ಮಣ್ಣನ್ನು ಸಾಗಾಟ ಮಾಡಿದ್ದಾರೆ ಎಂದು ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಎಂದರೆ ಸರಿ. ನಾವು ಟಿಪ್ಪರ್ ನಲ್ಲಿ ಮಣ್ಣು ಸಾಗಾಟ ಮಾಡುವ ಮೊದಲು ಮಣ್ಣು ಸಾಗಾಟ ಮಾಡಬೇಕಾದ ಜಾಗಕ್ಕೆ ರಸ್ತೆ ಸೌಕರ್ಯ ಯಾವ ರೀತಿ ಇದೆ ಎಂದು ಪರಿಶೀಲನೆ ಮಾಡುತ್ತೇನೆ ಎಂದರೆ ಸರಿ. ಮಣ್ಣು ತೆಗೆಯುವ ಜಾಗದಿಂದ ಮತ್ತು ರಸ್ತೆಗೆ ಪಟ್ಟವರನ್ನು ನಾವು ವಿಚಾರಣೆ ಮಾಡುತ್ತೇವೆ ಎಂದರೆ ಸರಿ. ನಾನು ಮಣ್ಣು ತೆಗೆಯಲು ತೆಕ್ಕಿಲ್ ರವರ ಬಳಿ ವಿಚಾರಿಸಿರುತ್ತೇನೆ, ಆದರೆ ಉಮ್ಮರ್ ರವರ ಬಳಿ ಸಾಗಾಟ ಮಾಡಲು ವಿಚಾರಿಸಿರುವುದಿಲ್ಲ. ಅಲ್ಲಿ ಜೆ.ಸಿಬಿ ಈಗಾಗಲೇ ಕೆಲಸ ಮಾಡುತ್ತಿದ್ದ ಕಾರಣ ನಾನು ಉಮ್ಮರ್ ರವರನ್ನು ವಿಚಾರಿಸಿರುವುದಿಲ್ಲ. ಸದರಿ ಜೆ.ಸಿ.ಬಿ ಮೂಲಕ ಕಾಂಪೌಂಡ್ ಬದಿಯಲ್ಲಿ ರಸ್ತೆ ಮಾಡಿರುತ್ತಾರೆ. ಆ ಸಮಯದಲ್ಲಿ ಆರೋಪಿಯ ಜಮೀನು ಮತ್ತು ಚಾಸಾ–4 ರವರ ಜಮೀನಿನ ನಡುವೆ ಕಾಂಪೌಂಡ್ ಕೆಲಸ ನಡೆಯುತ್ತಿತ್ತು. ನಾನು ಮೈನ್ ರೋಡ್ ನ ಎಂಟ್ರೆನ್ಸ್ ನಿಂದ ಕಾಂಪೌಂಡ್ ಬದಿಯಲ್ಲಿ ಮಣ್ಣನ್ನು ಸಾಗಾಟ ಮಾಡಿರುತ್ತೇನೆ. ನಿಪಿ–4 ಮತ್ತು 5 ರವಲ್ಲಿ ಚಾಸಾ1 ರವರು ತೋರಿಸಿರುವ ಜಾಗದಲ್ಲಿ ನಾನು ಮಣ್ಣು ಸಾಗಾಟ ಮಾಡಿರುವುದಿಲ್ಲ. ಅದೇ ರಸ್ತೆಯಲ್ಲಿ ಜೆ.ಸಿ.ಬಿ ಸಹ ಹೋಗುತ್ತದೆ. ಅದೇ ರಸ್ತೆಯಲ್ಲಿ ಕಗ್ಗಲ್ಲು ಸಾಗಾಟ ಮಾಡುತ್ತಿದ್ದರು. ನಾನು ಮಣ್ಣು ಸಾಗಾಟ ಮಾಡಿದ ನಂತರ ಚಾಸಾ–1 ರವರಾಗಲೀ ಚಾಸಾ–4 ರವರಾಗಲೀ ವಿಚಾರ ಮಾಡಿರುವುದಿಲ್ಲ. ನಿಪಿ–8, 19 ರಿಂದ 21 ಕ್ಕೆ ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ಪೊಲೀಸರು ಬರೆದ ದಾಖಲೆಗೆ ನಾನು ಸಹಿ ಮಾಡಿರುತ್ತೇನೆ. ಪಂಚನಾಮೆಯಲ್ಲಿ ಏನೆಲ್ಲಾ ಬರೆದಿದ್ದಾರೆ ನನಗೆ ಗೊತ್ತಿಲ್ಲ. ಪೊಲೀಸರು ಟಿಪ್ಪರ್ ಲಾರಿಯನ್ನು ತರಬೇಕು ಎಂದು ಹೇಳಿದ್ದು ಮತ್ತು ಅದನ್ನು ಬಿಡಿಸಿಕೊಳ್ಳಬೇಕು ಎಂದು

ಹೇಳಿರುತ್ತಾರೆ. ನಾನು ಪೊಲೀಸರ ಮುಂದೆ ಅನುಮತಿ ಇಲ್ಲದೇ ಮಣ್ಣು ಸಾಗಾಟ ಮಾಡಿದ್ದೇನೆ, ಇದರಿಂದ ಅವರಿಗೆ ನಷ್ಟವಾಗಿದೆ ಎಂದು ಹೇಳಿರುವುದಿಲ್ಲ.

**ಮರುವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

(ಸಾ.ಓ.ಹೇ.ಕೇ.ಸ.ಇ.ಎ.ಒ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಸುಳ್ಯ